ಶ್ರೀ ಕೆ. ಟಿ. ರಾಘೋಡ್.—ಒಟ್ಟಾಗಿ ಇಂಥ ಕಾರ್ಯಕ್ರಮಕ್ಕೆ ಎಷ್ಟು ಹಣ ಬೇಕಾಗುತ್ತದೆಂದು ಪಿಲ್ಲಾ ಮಟ್ಟದ ಪ್ರತೀರ್ಮಾನ ಮಾಡಿ ಕೊಟ್ಟಿರುತ್ತೇವೆ. ಇದು ಒಂದು ಆಸ್ಪತ್ರೆಯಲ್ಲ, ಬೇರೆ ಆಸ್ಪತ್ರೆಗಳಿಗೂ ಇದೇ ತರಹ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎಷ್ಟು ಹಣ ಬೇಕು ಎಂದು ಕೇಳಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ಅಸೆಸ್‌ಮೆಂಟ್ ಆಗಿದೆ.

ಶ್ರೀ ಪಿ. ಎಂ. ಭಂಗಿ.—ನನ್ನ (ಎಫ್) ಪ್ರಶ್ನೆಗೆ "ಹೌದು" ಎಂದು ಹೇಳಿದ್ದೀರಿ. ಅಲ್ಲಿ ಸಾಕಷ್ಟಾಗಲೂ ನೀರು ನಿಂತು ಮಲೇರಿಯೋ ಬ್ರೀಡಿಂಗ್ ಪ್ಲೇಸ್ ಆಗಿದೆ. ಇಂದಿನವರೆಗೂ ಏನೂ ಕೆಲಸ ಆಗಿಲ್ಲ ಈ ಕೆಲಸಕ್ಕೆ 500 ರೂಪಾಯಿಗಳನ್ನು ಖರ್ಚು ಮಾಡುವುದಕ್ಕೂ ಹಣ ಇಲ್ಲ ಎಂದರೆ ಹೇಗೆ?

ಶ್ರೀ ಕೆ. ಟಿ. ರಾಘೋಡ್.—ಇದು ಸರ್ಕಾರದ ಗಮನಕ್ಕೆ ಬಂದಿದೆ. ಬಂದಕೂಡಲೇ 1975-76ನೇ ಇಸವಿಯ ಬಜೆಟ್‌ನಲ್ಲಿ 10 ಸಾವಿರ ರೂಪಾಯಿಗಳನ್ನು ಜಮಖಂಡಿ ಆಸ್ಪತ್ರೆಗೆ ಪ್ರೊವಿಷನ್ ಕೊಡಬೇಕು ಎಂದು ಪ್ರೊವಿಷನ್ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು.—ಶ್ರೀ ಪ್ರಭಾಕರ್ ತೇಲ್ಕರ್ ಅವರ ಪರವಾಗಿ ಶ್ರೀ ಬಿ. ಜಿ. ಬಣಕಾರ್ ಅವರು ಪ್ರಶ್ನೆ ನಾಪ ಕೇಳಬಹುದು.

Photo System in Regi tration Department

31. Sri B. G. BANAKAR [On behalf of Sri Prabhakar Telkar Kalagi)].—

Will th Minister for Revenue be pleased to state :—

(*a*) whether the Govern ment has any scheme for starting photo system in Registration Departme nt for all the Registered documents;

(*b*) If so, when this system is propose l to be commenced ?

Sri N. HUTCHAMASTHY GOWDA (Minister for Revenue).—

(*a*) Yes.

(*b*) A Co mmittee with the Develop ment Co mmissioner, as the Chairman is constituted to make recommendations r garding mechanisation of administration. The scheme in respect of micro-filming registered documents will be commenced if and when it is recommended by the Committee and after such recommendations are considered and accepted by Government.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ (ಬಿ) ಪ್ರಶ್ನೆಗೆ ಉತ್ತರವಾಗಿ ಒಂದು ಕಮಿಟಿಯನ್ನು ನೇಮಿಸಿದ್ದೇವೆಂದು ಹೇಳಿದ್ದೀರಿ ಸಮಿತಿಯ ವರದಿ ಬರಲಿಕ್ಕೆ ಎಷ್ಟು ಕಾಲ ಬೇಕು ? ತೀರ್ವ್ರವಾಗಿ ಪರಿಶೀಲನೆ ತಲೆ ಕೊಂಡು ಕಾರ್ಯರೂಪಕ್ಕೆ ತರುವುದಕ್ಕೆ ಏಪರ್ಾಡು ಮಾಡುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ. ಈ ವಿಷಯದಲ್ಲಿ ಒಂದು ಸಬ್ ಕಮಿಟಿ ರಚನೆಯಾಗಿದೆ ಸಬ್ ಕಮಿಟಿಯವರು ಈ ವಿಷಯವನ್ನು ಪರಿಶೀಲನೆ ಮಾಡಿ, ಒಬ್ಬ ಅಧಿಕಾರಿಯನ್ನು ಮೈಸೂರಿನ ಪರವಾಗಿ ಪೂನಾಕ್ಕೆ ಕಳುಹಿಸಿ, ಅಲ್ಲಿ ನಡೆಯುತ್ತಾ ಇರತಕ್ಕಂಥದ್ದನ್ನು ಸ್ವತಃ ಖುದ್ದಾಗಿ ನೋಡಿ ಕೊಂಡು ಬಂದು ವರದಿ ಮಾಡುವಂತೆ ತಿಳಿಸಿದ್ದೇವೆ ವರದಿ ಬಂದ ಕೂಡಲೇ ಮುಂದಿನ ಕ್ರಮ ಅದಕ್ಕೆ ಬೇಕಾದಂಥ ಖರ್ಚಿನ ಅಂತ, ಇವೆಲ್ಲವನ್ನೂ ತಿಳಿಸಬೇಕು ಎನ್ನುವ ಅಭಿಪ್ರಾಯ ಇದೆ. ವರದಿ ಇನ್ನೂ ಬಂದಿಲ್ಲ, ಅದಷ್ಟು ಬೇಗ ತರಿಸಿಕೊಂಡು ಮುಂದಿನಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜಿ. ಬಣಕಾರ್.—ಕಾಗದಪತ್ರಗಳನ್ನು ನೋಂದಣಿ ಮಾಡುವ ನಲುವಾಗಿ ತೊಂದರೆಗಳು ಇವೆ, ಅದನ್ನು ನಿವಾರಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೋಂದಣಿ ಮಾಡತಕ್ಕ ಪ್ರಶ್ನೆಗೂ ಇದಕ್ಕೂ ಸಂಬಂಧ ಏಲ್ಲ, ಅದಕ್ಕೂ ಕೂಡ ಸಾಕಾದಷ್ಟು ಎಚ್ಚರಿಕೆ ತಗೆದುಕೊಂಡು ಯಾವರೀತಿಯಲ್ಲಿ ಇದನ್ನು ಪರಿಹರಿಸಬೇಕು ಎಂದು ಆಲೋಚನೆ ಮಾಡಿದ್ದೇವೆ.

Report of the One-Man Commission on Education

36. **Sri V. M. GHADI** (Haliyal).—

Will the Minister for Education be pleased to state :—

(*a*) the date on which the Government had appointed One-Man Commission (Education) for the purpose of finding out the defects i.e. mismanagement misappropriation, corruption, etc.) in schools and high Schools and Education Department, etc ;

(*b*) whether the Commission has submitted its report in this behalf ;

(*c*) if so, the sailent features of the said report ;

(*d*) the total amount spent on this Commission (details to be furnished) ?

Sri M. MALLIKARJUNASWAMY (Minister for Education).—

(*a*) 11-4-1972.

(*b*) Yes.

(*c*) The report is presented in 11 chapters. In the first 10 chapter, matters regarding the commencement of the work of the Commlssion, response from the public including the teachers. types of malpractices, etc , statistical information regarding the total number of private institutions under various categories, manangemet aspects, registration of the organisations under the Mysore Registration Act, Procedure for recognition of Aided Educational Institutions, Grant-in.Aid available to the various private institutions, conditions of service in these institutions, retirement benefits, proposals for legislation in respect of the Private Aided Educational Institutions have been dealt with In Chapter XI of the report, the Commission have furnished the summary of the main recommendations made..

(*d*) (i)	Salary	...	Rs. 22,306-40
(ii)	T. A.	..	Rs. 806-90
	Total	...	Rs. 3,113-30